**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**

**ಬ್ಯಾಡಗಿ.**

**ಸಿ.ಸಿ. ನಂ. 348/2025**

**ಸಿ ಡಬ್ಲ್ಯೂಃ 22**

**ಪಿ ಡಬ್ಲ್ಯೂಃ 8**

| | | |
|---|---|---|
| ಹೆಸರು | : | ಧರ್ಮಪ್ಪ ಬಳಿಗಾರ |
| ತಂದೆಯ ಹೆಸರು | : | ಕರಿಯಪ್ಪ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ಪಿ.ಎಸ್.ಐ ಮಹಿಳಾ ಪೊಲೀಸ್ ಠಾಣೆ, ಹಾವೇರಿ |
| ವಾಸಸ್ಥಳ | : | ಹಾವೇರಿ |

**ದಿನಾಂಕಃ 27-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ**

ದಿನಾಂಕಃ 17.03.2020 ರಿಂದ ದಿನಾಂಕಃ 23.05.2022 ರವರೆಗೆ ಕಾಗಿನೆಲೆ ಪೊ.ಠಾಣೆಯಲ್ಲಿ ಪಿ.ಎಸ್ ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕಃ 29.08.2021 ರಂದು ನಾನು ಕರ್ತವ್ಯದಲ್ಲಿದ್ದಾಗ ಬೆಳಿಗ್ಗೆ 10.30 ಗಂಟೆಗೆ ಹಾವೇರಿ ಜಿಲ್ಲಾ ಆಸ್ಪತ್ರೆಯ ಸಿಬ್ಬಂದಿಯವರ ನನಗೆ ಕರೆ ಮಾಡಿ ಬಡಮಲ್ಲಿ ಗ್ರಾಮದ ಹೇಮನಗೌಡ ಪಾಟೀಲ ರವರು ಹೊಡೆದಾಟದಲ್ಲಿ ಹಲ್ಲೇಗೊಂಡು ಹಾವೇರಿ ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಾದ ಬಗ್ಗೆ ತಿಳಿಸಿದ ಮೇರೆಗೆ ನಾನು ಆಸ್ಪತ್ರೆಗೆ ಬೇಟಿ ನೀಡಿ ಶವಗಾರದಲ್ಲಿದ್ದ ಹೇಮನಗೌಡರವರ ಶವವನ್ನು ಪರೀಕ್ಷಿಸಿಲಿದೆ. ಹೇಮನಗೌಡರವರು ಮಗ ಜೀವರಾಜ ಇವರು ಮದ್ಯಾಹ್ನ 12.00 ಕ್ಕೆ ದಸ್ತುರು ಮಾಡಿದ ಲಿಖಿತ ದೂರನ್ನು ಸ್ವೀಕರಿಸಿ ನಂತರ ಠಾಣೆಗೆ ಬಂದು ಮದ್ಯಾಹ್ನ 12.30 ಕ್ಕೆ ಚಾಸಾ-1 ರವರು ಆಸ್ಪತ್ರೆಯಲ್ಲಿ ನೀಡಿದ ದೂರಿನ ಆಧಾರದ ಮೇಲೆ ಗುನ್ಹಾ ನಂ.58/2021 ನ್ನು

ದಾಖಲಿಸಿ ಪ್ರ.ವ.ವ ವನ್ನು ನ್ಯಾಯಾಲಯಕ್ಕೆ ಸಲ್ಲಿಸಿ, ನಕಲನ್ನು ಮೇಲಾಧಿಕಾರಿಯವರಿಗೆ ಸಲ್ಲಿಸಿರುತ್ತೇನೆ. ಅದೇದಿನ ಪ್ರಕರಣವನ್ನು ಮುಂದಿನ ತನಿಖೆಯನ್ನು ಚಾಸಾ-23 ರವರಿಗೆ ವಹಿಸಿಕೊಟ್ಟಿರುತ್ತೇನೆ. ದೂರನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಪ್ರ,ವ,ವ ವನ್ನು ನಿಪಿ-27 ಎಂದು ಸಾಕ್ಷಿಯ ಸಹಿಯನ್ನು ನಿಪಿ-27 ಎ ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವಿ.ಎಂ.ಎನ್. ವಕೀಲರಿಂದಃ</u>**

ಆ ದಿನ ಜಿಲ್ಲಾ ಆಸ್ಪತ್ರೆಯಿಂದ ಯಾವ ಸಿಬ್ಬಂದಿ ಕರೆ ಮಾಡಿದ್ದರು ಅಂತಾ ಹೇಳಲು ನೆನಪಿರುವುದಿಲ್ಲ. ನಮ್ಮ ಕಚೇರಿಯ ಲ್ಯಾಂಡ್ ಲೈನ್ ಗೆ ಕರೆ ಬಂದಿತ್ತು. ಸದರಿ ದಿನ ಯಾವುದೇ ಘಟನೆ ಆಗದಿದ್ದರೂ ಸಹ ಆರೋಪಿಯ ವಿರುದ್ಧ ಸುಳ್ಳು ದೂರಿನ ಆಧಾರದ ಮೇಲೆ ಸುಳ್ಳು ಕೇಸನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

9 ರಿಂದ 11 ಆರೋಪಿ ಪರ ವಕೀಲರು 1 ರಿಂದ 8 ಆರೋಪಿತರ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತಾರೆ.

**<u>ಮರು ವಿಚಾರಣೆಃ</u> ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೆ.ಸರಿ ಇದೆ.

**Sd/-**
ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಬ್ಯಾಡಗಿ.